ಕರ್ನಾಟಕ ಸರ್ಕಾರ

(ಕಂದಾಯ ಇಲಾಖೆ)

ಉಪತಹಶೀಲ್ದಾರವರ ಕಾರ್ಯಾಲಯ ನಾಡಕಛೇರಿ ಕೊಟ್ಟೂರು

ಸಂ/ಕಂ/ಹ.ಬ./ನಾಕಕೊ/20/2016-17. ದಿನಾಂಕ:19-09-2016.

| ವಾದಿಗಳು | ಪ್ರತಿವಾದಿಗಳು |
|---|---|
| 1)ಲಲಿತಮ್ಮ ಗಂಡ ಲೇಟ್ ಬಸವರಾಜ<br>2)ಚೌಡಮ್ಮ ಗಂಡ ಲೇಟ್ ದೊಡ್ಡಬಸಪ್ಪ<br>ಬೆನಕನಹಳ್ಳಿ ಗ್ರಾಮ ಕೂಡ್ಲಿಗಿ ತಾಲೂಕು | 1)ಮಂಜಣ್ಣ ತಂದೆ ಲೇಟ್ ದೊಡ್ಡಬಸಪ್ಪ<br>2)ರಾಜಕುಮಾರ ತಂದೆ ಲೇಟ್ ದೊಡ್ಡಬಸಪ್ಪ<br>ಬೆನಕನಹಳ್ಳಿ ಗ್ರಾಮ ಕೂಡ್ಲಿಗಿ ತಾಲೂಕು |
| ಕೂಡ್ಲಿಗಿ ತಾಲೂಕು ಉಜ್ಜನಿ ಗ್ರಾಮದ ಸನಂ 1098ಎ/3. ವಿಸ್ತೀರ್ಣ 0-17 ಸೆಂಟ್ಸು ಜಮೀನನ್ನು ದಾನ ಪತ್ರ ಪ್ರಕಾರ ಹಕ್ಕು ಬದಲಾವಣೆ ಮಾಡುವ ಬಗ್ಗೆ. | |

ಪ್ರಸ್ತಾವನೆ:

ಕೂಡ್ಲಿಗಿ ತಾಲೂಕು ಉಜ್ಜನಿ ಗ್ರಾಮದ ಸನಂ 1098ಎ/3. ವಿಸ್ತೀರ್ಣ 0-17.ಸೆಂಟ್ಸು ಜಮೀನನ್ನು ಸದರಿ ತಾಲೂಕು ಬೆನಕನಹಳ್ಳಿ ಗ್ರಾಮದ ಚೌಡಮ್ಮ ಗಂಡ ಲೇಟ್ ದೊಡ್ಡಬಸಪ್ಪ ಇವರು ಸದರಿ ತಾಲೂಕು ಬೆನಕನಹಳ್ಳಿ ಗ್ರಾಮದ ಲಲಿತಮ್ಮ ಗಂಡ ಲೇಟ್ ಬಸವರಾಜ ಇವರ ಹೆಸರಿಗೆ ದಿನಾಂಕ 04-05-2016. ರ ಡಾಕ್ಯುಮೆಂಟ್ ನಂಬರ್: 370/2016-17. ರ ಪ್ರಕಾರ ದಾನ ಪತ್ರ ಬರೆಯಿಸಿ ಕೂಡ್ಲಿಗಿಯ ಉಪನೊಂದಣಾಧಿಕಾರಿಗಳ ಕಛೇರಿಯಲ್ಲಿ ನೊಂದಣಿ ಮಾಡಿಸಿ ಕೊಟ್ಟಿರುತ್ತಾರೆ. ಈ ಬಗ್ಗೆ ಗ್ರಾಮಲೆಕ್ಕಿಗರು ಉಜ್ಜನಿ ಇವರು ನಮೂನೆ-21 ನೋಟಿಸನ್ನು ದಿನಾಂಕ 06-05-2016 ರಂದು ಗ್ರಾಮದಲ್ಲಿ ಪ್ರಚೂರು ಪಡಿಸಿ ಹಾಗೂ ಸಂಬಂಧಪಟ್ಟವರಿಗೆ ಜಾರಿ ಮಾಡಲಾಗಿ ಸದರಿ ತಾಲೂಕು ಬೆನಕನಹಳ್ಳಿ ಗ್ರಾಮದ ಮಂಜಣ್ಣ ತಂದೆ ಲೇಟ್ ದೊಡ್ಡಬಸಪ್ಪ. ರಾಜಕುಮಾರ ತಂದೆ ಲೇಟ್ ದೊಡ್ಡಬಸಪ್ಪ. ಇವರುಗಳು ತಕರಾರು ಅರ್ಜಿ ಸಲ್ಲಿಸಿರುವ ಕಾರಣ ಈ ಪ್ರಕರಣದ ಎಂ.ಆರ್.ನಂಬರ್: 102/2015-16. ದಿನಾಂಕ 06-06-2016 ರಲ್ಲಿ ವಿವಾದಾಸ್ಪದ ಪ್ರಕರಣವೆಂದು ಪರಿಗಣಿಸಿ ಮುಂದಿನ ಕ್ರಮಕ್ಕೆ ಈ ಕಾರ್ಯಾಲಯಕ್ಕೆ ಕಳುಹಿಸಿ ಕೊಟ್ಟಿರುತ್ತಾರೆ.

ಈ ಪ್ರಕರಣವನ್ನು ಈ ಕಾರ್ಯಾಲಯದಲ್ಲಿ ವಿಚಾರಣೆ ಮಾಡುವ ದಿಸೆಯಲ್ಲಿ ಉಭಯ ಪಕ್ಷದವರಿಗೂ ನೋಟಿಸ್ಸು ನೀಡಿ ದಿನಾಂಕ 14-06-2016. ರಿಂದ 19-09-2016 ರ ವರೆಗೆ ವಿಚಾರಣೆ ಮಾಡಲಾಯಿತು.

ವಿಚಾರಣೆ ಸಮಯದಲ್ಲಿ ಅರ್ಜಿದಾರರು ಮತ್ತು ತಕರಾರುದಾರರು ಹಾಗೂ ಅವರ ಪರ ನ್ಯಾಯಾವಾದಿಗಳು ಹಾಜರಾಗಿರುತ್ತಾರೆ. ಅರ್ಜಿದಾರರು ಉಜ್ಜನಿ ಗ್ರಾಮದ ಸನಂ 1098ಎ/3. ವಿಸ್ತೀರ್ಣ 0-17 ಸೆಂಟ್ಸು ಜಮೀನು ನಮ್ಮ ತಾಯಿಯವರಾದ ಚೌಡಮ್ಮ ಗಂಡ ಲೇಟ್ ದೊಡ್ಡಬಸಪ್ಪ ಇವರ ಹೆಸರಿನಲ್ಲಿ ಲೆಕ್ಕ ದಾಖಲೆಯಲ್ಲಿ ಮತ್ತು ಗ್ರಾಮ ಪಂಚಾಯಿತಿ ಲೆಕ್ಕ ದಾಖಲೆಯಲ್ಲಿ ಅವರ ಹೆಸರಿನಲ್ಲಿ ಖಾತೆಗಳಿದ್ದು ಅವರು ನನ್ನ ಮೇಲಿನ ಪ್ರೀತಿ ವಿಶ್ವಾಸದಿಂದಲೂ ಮತ್ತು ಈಗ ತನ್ನ ಅನುಭವದಲ್ಲಿರುವ ಜಮೀನನ್ನು ದಿನಾಂಕ 04-05-2016 ರ ಡಾಕ್ಯುಮೆಂಟ್ ನಂಬರ್: 370/2016-17. ರ ಪ್ರಕಾರ ನನ್ನ ಹೆಸರಲ್ಲಿ ದಾನ ಪತ್ರ ಬರೆಯಿಸಿ ಕೂಡ್ಲಿಗಿಯ ಉಪನೊಂದಣಾಧಿಕಾರಿಗಳ ಕಛೇರಿಯಲ್ಲಿ ನೊಂದಣಿ ಮಾಡಿಸಿ ಕೊಟ್ಟಿರುತ್ತಾರೆ. ಕಾರಣ ಸದರಿ ದಾನ ಪತ್ರ ಪ್ರಕಾರ ನನ್ನ ಹೆಸರಲ್ಲಿ ಹಕ್ಕು ಬದಲಾವಣೆ ಮಾಡಬೇಕೆಂದು ಕೋರಿರುತ್ತಾರೆ.

ವಿಚಾರಣೆಯಲ್ಲಿ ಎರಡನೇ ಅರ್ಜಿದಾರರು ಹಾಜರಾಗಿದ್ದು ಸದರಿ ವಿವಾದಿತ ಜಮೀನನ್ನು ನಾನು ಈ ಹಿಂದೆ ಸಣ್ಣ ವಡ್ಡರ ಸಂಜೀವಪ್ಪನ ಮಗ ತಿಮ್ಮಪ್ಪನ ಕಡೆಯಿಂದ ದಿನಾಂಕ 18-01-1987 ರ ಪ್ರಕಾರ ಖರೀದಿಸಿರುವುದರಿಂದ ಅದರ ಮೇಲೆ ನಮಗೆ ಸಂಪೂರ್ಣ ಹಕ್ಕು ಇದ್ದು ಅದನ್ನು ನಾವು ಸ್ವ ಇಚ್ಛೇಯಿಂದ ದಾನ ಪತ್ರ ಮಾಡಿಸಿರುವುದಾಗಿ ತಿಳಿಸಿರುತ್ತಾರೆ.

ಮು.ತಿ.ನೋ-2

ವಿಚಾರಣೆಯಲ್ಲಿ ತಕರಾರುದಾರರ ಪರ ನ್ಯಾಯಾವಾದಿಗಳು ಹಾಜರಾಗಿದ್ದು ಸದರಿ ವಿವಾದಿತ ಜಮೀನನ್ನು ಪ್ರತಿವಾದಿಗಳಿಗೆ ಆಸ್ತೀ ಭಾಗ ಮಾಡಿ ಕೊಟ್ಟಿರುವುದಾಗಿ ತಿಳಿಸಿರುತ್ತಾರೆ. ಹಾಗೂ ಸದರಿ ಜಮೀನಿನಲ್ಲಿ ಪ್ರತಿವಾದಿಗೆ ಭಾಗ ಇರುವುದಾಗಿಯು ತಿಳಿಸಿರುತ್ತಾರೆ. ಹಾಗೂ ಈ ಬಗ್ಗೆ ಸಿವಿಲ್ ನ್ಯಾಯಾಲಯದಲ್ಲಿ ಆಸ್ತೀ ಭಾಗಕ್ಕಾಗಿ ಸಂಬಂದಿಸಿದಂತೆ ಧಾವೆ ಹೂಡುವುದಾಗಿಯೂ ತಿಳಿಸಿರುತ್ತಾರೆ.

ಮೇಲಿನ ಎಲ್ಲಾ ಅಂಶಗಳನ್ನು ಗಣನೆಗೆ ತೆಗೆದು ಕೊಂಡು ಸದರಿ ವಿವಾದಿತ ಜಮೀನಿನ ಕಂದಾಯ ಲೆಕ್ಕಗಳನ್ನು ಪರಿಶೀಲಿಸಿ ಅರ್ಜಿದಾರರ ಹೇಳೀಕೆ ಮತ್ತು ತಕರಾರುದಾರರ ಪರ ನ್ಯಾಯಾವಾದಿಗಳ ಹೇಳಿಕೆಗಳನ್ನು ಕೇಳಿ ಈ ನ್ಯಾಯಾಲಯದಲ್ಲಿ ನೊಂದಾಯಿತ ದಸ್ತಾವೇಜನ್ನು ರದ್ದು ಪಡಿಸುವ ಅಧಿಕಾರ ಇಲ್ಲದಿರುವುದರಿಂದ ಅದರ ಅನ್ವಯ ಕರ್ನಾಟಕ ಭೂಕಂದಾಯ ಕಾಯ್ದೇ 1964 ರಕಲ 128 ರ ಅಡಿಯಲ್ಲಿ ಈ ಕೆಳಗಿನಂತೆ ಆದೇಶ ಮಾಡಲಾಗಿದೆ.

## -:ಆದೇಶ:-

ಮೇಲೆ ವಿವರಿಸಿದ ಸಂದರ್ಭ ವಾಸ್ತುವಾಂಶ ಮತ್ತು ಕಾರಣಗಳಿಂದ ಕೂಡ್ಲಿಗಿ ತಾಲೂಕು ಉಜ್ಜನಿ ಗ್ರಾಮದ ಸನಂ 1098ಎ/3. ವಿಸ್ತೀರ್ಣ 0-17 ಸೆಂಟ್ಸು ಜಮೀನನ್ನು ದಿನಾಂಕ: 04-05-2016 ರ ಡಾಕ್ಯುಮೆಂಟ್ ನಂಬರ್: 370/2016-17. ರ ದಾನ ಪತ್ರ ದಸ್ತಾವೇಜು ಪ್ರಕಾರ ಅರ್ಜಿದಾರರಾದ ಲಲಿತಮ್ಮ ಗಂಡ ಲೇಟ್ ಬಸವರಾಜ ಬೆನಕನಹಳ್ಳಿ ಗ್ರಾಮ ಇವರ ಹೆಸರಲ್ಲಿ ಹಕ್ಕು ಬದಲಾವಣೆ ಮಾಡಲು ಆದೇಶಿಸಲಾಗಿದೆ. ಹಾಗೂ ತಕರಾರುದಾರರು ತಮ್ಮ ಹಕ್ಕಿನ ಸಾಧನೆಗಾಗಿ ಮಾನ್ಯ ಸಿವಿಲ್ ನ್ಯಾಯಾಲಯದ ಮೋರೆ ಹೋಗಲು ಸಹಾ ಸೂಚಿಸಿದೆ.

ಈ ಆದೇಶವನ್ನು ಹೇಳಿ ಬರೆಯಿಸಿ ಬೆರಳಚ್ಚು ಮಾಡಿಸಿ ತಪ್ಪುಗಳನ್ನು ತಿದ್ದಿ ದಿನಾಂಕ 19-09-2016 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ಉಪತಹಶೀಲ್ದಾರರು
ನಾಡಕಚೇರಿ

ಇದರ ಪ್ರತಿಯನ್ನು:

1) ಅರ್ಜಿದಾರರಾದ ಲಲಿತಮ್ಮ ಗಂಡ ಲೇಟ್ ಬಸವರಾಜ. ಚೌಡಮ್ಮ ಗಂಡ ಲೇಟ್ ದೊಡ್ಡಬಸಪ್ಪ. ಬೆನಕನಕನಹಳ್ಳಿ ಗ್ರಾಮ ಕೂಡ್ಲಿಗಿ ತಾಲೂಕು ಇವರಿಗೆ ಕಳುಹಿಸಿ ಕೊಡಲಾಗಿದೆ.
2) ತಕರಾರುದಾರರಾದ ಮಂಜಣ್ಣ ತಂದೆ ಲೇಟ್ ದೊಡ್ಡಬಸಪ್ಪ. ರಾಜಕುಮಾರ ತಂದೆ ಲೇಟ್ ದೊಡ್ಡಬಸಪ್ಪ. ಬೆನಕನಹಳ್ಳಿ ಗ್ರಾಮ ಕೂಡ್ಲಿಗಿ ತಾಲೂಕು ಇವರ ಪರ ವಕೀಲರಾದ ಸಿದ್ದೇಶ್. ಬಿ. ವಕೀಲರು ಕೂಡ್ಲಿಗಿ ಇವರ ದ್ವಾರ ಕಳುಹಿಸಿ ಕೊಡಲಾಗಿದೆ.
3) ಗಣಕೀಕರಣ ವಿಭಾಗ ತಾಲೂಕು ಕಛೇರಿ ಕೂಡ್ಲಿಗಿ ಇವರ ಮುಂದಿನ ಕ್ರಮಕ್ಕಾಗಿ ಕಳುಹಿಸಿ ಕೊಡಲಾಗಿದೆ.
4) ಅಪೀಲು ಅವಧಿ 60 ದಿವಸ ಇರುತ್ತದೆ.